# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 99(44)
ಮಾನ್ಯ ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 13.02.2024
ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದೇವನಹಳ್ಳಿ ಹೈಟೆಕ್ ಡಿಫೆನ್ಸ್ ಏರೋಸ್ಪೇಸ್ ಪಾರ್ಕ್‌ನಲ್ಲಿ ಮೊದಲನೆ ಮತ್ತು ಎರಡನೇ ಹಂತ (ಹರಳೂರು-ಮುದ್ದೇನಹಳ್ಳಿ) ಪ್ರದೇಶದಲ್ಲಿ ಬ್ರಿಗೇಡ್ ಸಂಸ್ಥೆಯವರಿಗೆ ಎಷ್ಟು ಎಕರೆ ಪ್ರದೇಶವನ್ನು ಹಂಚಿಕೆ ಮಾಡಲಾಗಿದೆ; ಎಷ್ಟು ಎಕರೆ ಪ್ರದೇಶವನ್ನು ಯಾವ ಯಾವ ಉದ್ದೇಶಕ್ಕೆ ಯಾವಾಗ ಹಂಚಿಕೆ ಮಾಡಲಾಗಿದೆ; | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಮೆ: ಬ್ರಿಗೇಡ್ ಸಂಸ್ಥೆಯವರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ 1 ಮತ್ತು 2ನೇ ಹಂತ ಕೈಗಾರಿಕಾ ಪ್ರದೇಶಗಳಲ್ಲಿ ಈ ಕೆಳಕಂಡಂತೆ ಜಮೀನು ಹಂಚಿಕೆ ಮಾಡಿರುತ್ತದೆ: -<br><br>1. ಮೆ:Brigade Estates & Projects Pvt Ltd, ರವರಿಗೆ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ (ಐಟಿ ಸೆಕ್ಟರ್) 1ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ನಿವೇಶನ ಸಂಖ್ಯೆ.8-ಪಿ, 9 ಮತ್ತು 10 ರಲ್ಲಿ ಒಟ್ಟು 25.00 ಎಕರೆ ಜಮೀನನ್ನು Aerospace Defence Components Manufacturing Activities along with IT/ITES Park ಯೋಜನೆಗೆ ಹಂಚಿಕೆ ಮಾಡಿ, 101098.00 ಚ.ಮೀ. ಜಮೀನಿಗೆ (24.98 ಎಕರೆ) ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗಿದೆ. ಹಂಚಿಕೆಯಾದ ಜಮೀನಿನಲ್ಲಿ ಮಂಡಳಿಯು ನೀರಿನ ಒಳ ಚರಂಡಿಯನ್ನು ನಿರ್ಮಿಸಿದ್ದರಿಂದ ನಿವೇಶನದ ಅಳತೆಯನ್ನು ಪರಿಷ್ಕರಿಸಿ 100244.00 ಚ.ಮೀ ಜಮೀನಿಗೆ (24.77 ಎಕರೆ) ಪರಿಷ್ಕೃತ ಸ್ವಾಧೀನ ಪತ್ರವನ್ನು ನೀಡಲಾಗಿರುತ್ತದೆ. ಹಾಗೂ ದಿನಾಂಕ:26-07-2021 ರಂದು ಸದರಿ ಜಮೀನಿಗೆ ತಿದ್ದುಪಡಿ ಕರಾರು ಪತ್ರ ನೆರವೇರಿಸಲಾಗಿರುತ್ತದೆ.<br><br>2. ಮೆ: Brigade Foundation ರವರಿಗೆ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ (ಐಟಿ ಸೆಕ್ಟರ್) 1ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ನಿವೇಶನ ಸಂಖ್ಯೆ.10-ಪಿ, ರಲ್ಲಿ 5.00 ಎಕರೆ ಜಮೀನನ್ನು Vocational Training Institute ಯೋಜನೆಗೆ ದಿನಾಂಕ:08-05-2013 ರಂದು ಹಂಚಿಕೆ ಮಾಡಿದ್ದು, 19212.00 ಚ.ಮೀ ಜಮೀನಿಗೆ (4.75 ಎಕರೆ) ದಿನಾಂಕ:31-08-2019 ರಂದು 99 ವರ್ಷ ಗುತ್ತಿಗೆ ಅವಧಿಗೆ ಗುತ್ತಿಗೆ ಕರಾರು ಪತ್ರ ನೆರವೇರಿಸಲಾಗಿದೆ. |

| | | |
|---|---|---|
| | | 3. ಮೆ:Brigade Tetrarch Pvt Ltd ರವರಿಗೆ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ (ಹಾರ್ಡ್ ವೇರ್ ಸೆಕ್ಟರ್) ರಲ್ಲಿ ನಿವೇಶನ ಸಂಖ್ಯೆ.ಆರ್-5 ಮತ್ತು ಆರ್-8 ರಲ್ಲಿ ಒಟ್ಟು 202344.00 ಚ.ಮೀ (50.00 ಎಕರೆ) ಜಮೀನನ್ನು Affordable Housing Project ಯೋಜನೆಗೆ ದಿನಾಂಕ: 04-04-2017 ರಂದು ಹಂಚಿಕೆ ಮಾಡಲಾಗಿದೆ, ದಿನಾಂಕ:02-03-2019 ರಂದು ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗಿದೆ.<br><br>4. ಮೆ:Tetrarch Developers Ltd ರವರಿಗೆ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್, 2ನೇ ಹಂತದಲ್ಲಿನ ನಿವೇಶನ ಸಂಖ್ಯೆ.305, 306, 307, 308 & 309 ರಲ್ಲಿ 74.21 ಎಕರೆ ಜಮೀನನ್ನು Multi-Sector Industrial Park, Aerospace, Defence, Data Centres, Electronics, Hitech Logistics, Housing and Other Social Infrastructure Activities ಯೋಜನೆಗೆ ದಿನಾಂಕ:13-06-2022ರಂದು ಹಂಚಿಕೆ ಮಾಡಲಾಗಿದೆ. |
| ಆ) | ಕೆಐಎಡಿಬಿಯ ಹಂಚಿಕೆ ನಿಯಮದಂತೆ ಸದರಿ ಸಂಸ್ಥೆಯ ವರು ಮೊದಲನೆ ಹಂತದಲ್ಲಿ ಹಂಚಿಕೆಯಾಗಿರುವ ಪ್ರದೇಶದಲ್ಲಿ ಯೋಜನೆಯನ್ನು ನಿಗದಿತ ಸಮಯದಲ್ಲಿ ಕಾರ್ಯಗತ ಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 1. ಮೆ:Brigade Foundation ರವರಿಗೆ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ (ಐಟಿ ಸೆಕ್ಟರ್) 1ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ನಿವೇಶನ ಸಂಖ್ಯೆ.10-ಪಿ, ರಲ್ಲಿನ 4.75 ಎಕರೆ ಜಮೀನಿಗೆ ದಿನಾಂಕ:31-08-2019 ರಂದು 99 ವರ್ಷ ಗುತ್ತಿಗೆ ಅವಧಿಗೆ ಗುತ್ತಿಗೆ ಕರಾರು ಪತ್ರ ನೆರವೇರಿಸಲಾಗಿದ್ದು, ಅದರನ್ವಯ ಯೋಜನೆ ಅನುಷ್ಠಾನಗೊಳಿಸಲು 03 ವರ್ಷಗಳ ಕಾಲಾವಕಾಶವು ದಿನಾಂಕ:31-08-2022 ರಂದು ಪೂರ್ಣಗೊಂಡಿರುತ್ತದೆ. ಕಂಪನಿಯು ಕಟ್ಟಡ ನಕ್ಷೆ ಅನುಮೋದನೆ ಪಡೆದುಕೊಂಡಿರುತ್ತಾರೆ.<br><br>ಮೆ:Brigade Foundation ರವರಿಗೆ ಹಂಚಿಕೆಯಾದ ಜಮೀನಿನಲ್ಲಿ ಉದ್ದೇಶಿತ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಾವಕಾಶ ಮುಗಿದು ವಿಫಲಾಗಿರುವುದರಿಂದ ಸದರಿ ಸಂಸ್ಥೆಯ ವಿರುದ್ಧ ಕೆಐಎಡಿ ಕಾಯ್ದೆ ಕಲಂ 34-ಬಿ1 ರಡಿ ದಿನಾಂಕ:19-12-2022 ರಂದು ಮತ್ತು ದಿನಾಂಕ:09-02-2023 ರಂದು ಕೆಐಎಡಿ ಕಾಯ್ದೆ ಕಲಂ 34-ಬಿ2 ರಡಿ ನೋಟೀಸ್ ಗಳನ್ನು ನೀಡಲಾಗಿದ್ದು, ತದನಂತರ, ಕೆಐಎಡಿ ಕಾಯ್ದೆ ಕಲಂ 34-ಬಿ3 ರಡಿ ದಿನಾಂಕ:07-06-2023 ರಂದು ವಿಚಾರಣೆ ನಡೆಸಿ, ಮೆ:Brigade Foundation ರವರಿಗೆ ರೂ.62,80,774/- ಗಳ ದಂಡ ಪಾವತಿಸುವ ಷರತ್ತಿಗೊಳಪಟ್ಟು ಸದರಿ ನಿವೇಶನದಲ್ಲಿ ಯೋಜನೆ ಅನುಷ್ಠಾನಗೊಳಿಸಲು 18 ತಿಂಗಳ ಕಾಲಾವಕಾಶ ನೀಡಿ ದಿನಾಂಕ:09-06-2023 ರಂದು ಆದೇಶ ಹೊರಡಿಸಲಾಗಿದೆ.<br><br>ತದನಂತರ, ಮೆ:Brigade Foundation ರವರು ಮನವಿ ಸಲ್ಲಿಸಿ, ತಮಗೆ ವಿಧಿಸಿರುವ ಮೇಲ್ಕಂಡ ದಂಡದ ಮೊತ್ತವನ್ನು ಮನ್ನಾ ಮಾಡಲು ಕೋರಿದ್ದು, ಸದರಿಯವರ ಮನವಿಯನ್ನು ತಿರಸ್ಕರಿಸಿ, ದಂಡದ ಮೊತ್ತ ಪಾವತಿಸಲು ದಿನಾಂಕ:31-10-2023ರ ಪತ್ರದ ಮೂಲಕ ತಿಳಿಸಲಾಗಿದೆ. |

2. ಮೆ:Brigade Estates & Projects Pvt Ltd, ರವರಿಗೆ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ (ಐಟಿ ಸೆಕ್ಟರ್) 1ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ನಿವೇಶನ ಸಂಖ್ಯೆ.8-ಪಿ, 9 ಮತ್ತು 10 ರಲ್ಲಿ ಒಟ್ಟು 25.00 ಎಕರೆ ಜಮೀನನ್ನು ಹಂಚಿಕೆ ಮಾಡಿ, ಸ್ವಾಧೀನ ಪತ್ರ ನೀಡಿ, ದಿನಾಂಕ:29-06-2019 ರಂದು 101098.00 ಚ.ಮೀ. ಜಮೀನಿಗೆ (24.98 ಎಕರೆ) ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗಿದ್ದು, ಹಂಚಿಕೆಯಾದ ಜಮೀನಿನಲ್ಲಿ ಮಂಡಳಿಯು ನೀರಿನ ಒಳ ಚರಂಡಿಯನ್ನು ನಿರ್ಮಿಸಿದ್ದರಿಂದ ನಿವೇಶನದ ಅಳತೆಯನ್ನು ಪರಿಷ್ಕರಿಸಿ 100244.00 ಚ.ಮೀ ಜಮೀನಿಗೆ (24.77 ಎಕರೆ) ಪರಿಷ್ಕೃತ ಸ್ವಾಧೀನ ಪತ್ರವನ್ನು ದಿನಾಂಕ:31-03-2021 ರಂದು ನೀಡಲಾಗಿರುತ್ತದೆ. ಹಾಗೂ ದಿನಾಂಕ:26-07-2021 ರಂದು ಸದರಿ ಜಮೀನಿಗೆ ತಿದ್ದುಪಡಿ ಕರಾರು ಪತ್ರ ನೆರವೇರಿಸಲಾಗಿರುತ್ತದೆ.

   ಮುಂದುವರೆದು, ದಿನಾಂಕ:21-10-2022 ರಂದು ನಡೆದ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯಲ್ಲಿ ಸದರಿ ಕಂಪನಿಗೆ ಯೋಜನೆ ಅನುಷ್ಠಾನಗೊಳಿಸಲು 24 ತಿಂಗಳ ಹೆಚ್ಚುವರಿ ಕಾಲಾವಕಾಶವನ್ನು ನೀಡಲು ಮತ್ತು Aerospace Defence Components Manufacturing Activities along with IT/ITES Park ಜೊತೆಗೆ Data Centre activity ಸೇರಿಸಿಕೊಳ್ಳಲು ಅನುಮೋದನೆ ನೀಡಲಾಗಿರುತ್ತದೆ. ಅದರಂತೆ ಸರ್ಕಾರಿ ಆದೇಶ ಸಂ:ಸಿಐ 367 ಎಸ್ ಪಿಐ 2022 ಬೆಂಗಳೂರು ದಿನಾಂಕ:14-11-2022 ಆದೇಶ ಹೊರಡಿಸಲಾಗಿದೆ.

   ಸದರಿ ಕಂಪನಿಯವರಿಗೆ ಮೇಲ್ಕಂಡ ಹೆಚ್ಚುವರಿ ಯೋಜನೆ ಸೇರ್ಪಡೆ ಸಂಬಂಧಿಸಿದಂತೆ ಪರಿಷ್ಕೃತ ಯೋಜನಾ ವರದಿ ಮತ್ತು ಸದರಿ ನಿವೇಶನದಲ್ಲಿ ಯೋಜನೆ ಅನುಷ್ಠಾನಗೊಳಿಸಲು ತೆಗೆದುಕೊಂಡಿರುವ ಸಕಾರಾತ್ಮಕ ಕ್ರಮಗಳ ವಿವರಗಳನ್ನು ಸಲ್ಲಿಸಲು ತಿಳಿಸಲಾಗಿದೆ.

3. ಮೆ:Brigade Tetrarch Pvt Ltd ರವರಿಗೆ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ (ಹಾರ್ಡ್ ವೇರ್ ಸೆಕ್ಟರ್) ರಲ್ಲಿ ನಿವೇಶನ ಸಂಖ್ಯೆ.ಆರ್-5 ಮತ್ತು ಆರ್-8 ರಲ್ಲಿ ಒಟ್ಟು 202344.00 ಚದರ ಮೀಟರ್ (50.00 ಎಕರೆ) ಜಮೀನನ್ನು ಹಂಚಿಕೆ ಮಾಡಿ, ಸ್ವಾಧೀನ ಪತ್ರ ನೀಡಿ, ದಿನಾಂಕ:02-03-2019 ರಂದು ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗಿದ್ದು, ಅದರನ್ವಯ ಕಂಪನಿಯು ಯೋಜನೆ ಅನುಷ್ಠಾನಗೊಳಿಸಲು 06 ವರ್ಷ ಕಾಲಾವಕಾಶವಿದ್ದು, ದಿನಾಂಕ:02-03-2026 ರವರೆಗೆ ಸಮಯ ಇರುತ್ತದೆ. ಸದರಿ ಕಂಪನಿಯು ಹಂಚಿಕೆಯಾಗಿರುವ ಒಟ್ಟಾರೆ 50.00 ಎಕರೆ ಜಮೀನಿನ ಪೈಕಿ 12 ಎಕರೆ ಜಮೀನಿನಲ್ಲಿ ಯೋಜನೆ ಅನುಷ್ಠಾನಗೊಳಿಸಿದ್ದಾರೆ.

| | | |
|---|---|---|
| ಇ) | ಹಾಗಾದಲ್ಲಿ ಮಂಜೂರಾತಿ ರದ್ದತಿ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಮೇಲೆ ತಿಳಿಸಿದಂತೆ, ಮೆ:Brigade Foundation ರವರಿಗೆ ಹಂಚಿಕೆಯಾಗಿರುವ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ (ಐಟಿ ಸೆಕ್ಟರ್) 1ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ನಿವೇಶನ ಸಂಖ್ಯೆ.10-ಪಿ, ರಲ್ಲಿನ 4.75 ಎಕರೆ ಜಮೀನಿಗೆ ರೂ.62,80,774/- ಗಳ ದಂಡ ಪಾವತಿಸುವ ಷರತ್ತಿಗೊಳಪಟ್ಟು ಸದರಿ ನಿವೇಶನದಲ್ಲಿ ಯೋಜನೆ ಅನುಷ್ಠಾನಗೊಳಿಸಲು 18 ತಿಂಗಳ ಕಾಲಾವಕಾಶ ನೀಡಿ ದಿನಾಂಕ:09-06-2023 ರಂದು ಆದೇಶ ನೀಡಲಾಗಿದೆ.<br><br>ಮೆ: Brigade Estates & Projects Pvt Ltd, ರವರಿಗೆ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ (ಐಟಿ ಸೆಕ್ಟರ್) 1ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ ನಿವೇಶನ ಸಂಖ್ಯೆ.8-ಪಿ, 9 ಮತ್ತು 10 ರಲ್ಲಿನ 24.77 ಎಕರೆ ಜಮೀನಿಗೆ ದಿನಾಂಕ: 21-10-2022 ರಂದು ನಡೆದ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯ ನಿರ್ಣಯದಂತೆ, ಯೋಜನೆ ಅನುಷ್ಠಾನಗೊಳಿಸಲು 24 ತಿಂಗಳ ಹೆಚ್ಚುವರಿ ಕಾಲಾವಕಾಶವನ್ನು ನೀಡಿ ಸರ್ಕಾರಿ ಆದೇಶ ಸಂ:ಸಿಐ 367 ಎಸ್ ಪಿಐ 2022 ಬೆಂಗಳೂರು ದಿನಾಂಕ:14-11-2022 ಆದೇಶ ಹೊರಡಿಸಲಾಗಿದೆ.<br><br>ಸದರಿ ಆದೇಶಗಳನ್ವಯ ಮೆ:Brigade Foundation ರವರು ಮತ್ತು ಮೆ:Brigade Estates & Projects Pvt Ltd., ರವರು ವಿಸ್ತರಿಸಿದ ಕಾಲಾವಕಾಶದಲ್ಲಿ ಯೋಜನೆ ಅನುಷ್ಠಾನಗೊಳಿಸಲು ವಿಫಲರಾದಲ್ಲಿ ಮಂಡಳಿಯ ನಿಯಮಾನುಸಾರ ಕೆಐಎಡಿ ಕಾಯ್ದೆ ಕಲಂ 34-ಬಿರಡಿ ಜಮೀನು ಹಿಂಪಡೆಯುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ. |
| ಈ) | ಸದರಿ ಸಂಸ್ಥೆಗೆ ಎರಡನೇ ಹಂತದ ಹರಳೂರು-ಮುದ್ದೇನ ಹಳ್ಳಿ ಪ್ರದೇಶದಲ್ಲಿ ಕೈಗಾರಿಕಾ ಬಡಾವಣೆ ಪೂರ್ಣ ಪ್ರಮಾಣ ದಲ್ಲಿ ನಿರ್ಮಾಣವಾಗದೆ ಅಧಿಸೂಚನೆ ಹೊರಡಿಸದೆ ಸುಮಾರು 20 ಎಕರೆಗೂ ಮೇಲ್ಪಟ್ಟ ಮತ್ತೊಂದು ಭೂಮಿ ಯನ್ನು ನೀಡಿರುವುದು ಸರ್ಕಾರ ದ ಗಮನಕ್ಕೆ ಬಂದಿದೆಯೇ; | ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್, 2ನೇ ಹಂತ ಕೈಗಾರಿಕಾ ಪ್ರದೇಶದ ವಿನ್ಯಾಸ ನಕ್ಷೆಯನ್ನು ದಿನಾಂಕ: 06-08-2020 ರಂದು ನಡೆದ ಮಂಡಳಿ ಸಭೆಯಲ್ಲಿ ಅನುಮೋದನೆಗೊಂಡಿದ್ದು, ಪರಿಷ್ಕೃತ ವಿನ್ಯಾಸ ನಕ್ಷೆಯನ್ನು ದಿನಾಂಕ:18-01-2022ರ ಮಂಡಳಿ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ. ಸದರಿ ಕೈಗಾರಿಕಾ ಪ್ರದೇಶದಲ್ಲಿ ಬಹುತೇಕ ರಸ್ತೆ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಮಂಡಳಿಯು ಸದರಿ ಕೈಗಾರಿಕಾ ಪ್ರದೇಶದ ಭೂ ಸ್ವಾಧೀನಕ್ಕಾಗಿ ಭೂ ಪರಿಹಾರ ವಿತರಿಸಿರುವುದರಿಂದ ಹಾಗೂ ಅಭಿವೃದ್ಧಿ ಕಾರ್ಯಕ್ಕಾಗಿ ವೆಚ್ಚ ಮಾಡಿರುವುದರಿಂದ ಜಮೀನು ಹಂಚಿಕೆ ಕಾರ್ಯವನ್ನು ಕೈಗೊಂಡಿರುತ್ತದೆ.<br><br>ಮೆ:Tetrarch Developers Ltd ರವರಿಗೆ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್, 2ನೇ ಹಂತದಲ್ಲಿನ ನಿವೇಶನ ಸಂಖ್ಯೆ.305, 306, 307, 308 & 309 ರಲ್ಲಿ ಒಟ್ಟು 74.21 ಎಕರೆ ಜಮೀನನ್ನು ದಿನಾಂಕ:13-06-2022ರಂದು ಹಂಚಿಕೆ ಮಾಡಲಾಗಿದೆ. |

| | | |
|---|---|---|
| ಉ) | ಸದರಿ ಸಂಸ್ಥೆ ಮೊದಲನೇ ಹಂತದಲ್ಲಿ ನಿಗದಿತ ಅವಧಿಯಲ್ಲಿ ಕೈಗಾರಿಕೆಯನ್ನು ಪ್ರಾರಂಭಿಸಿದೆ ಇರುವ ಇವರಿಗೆ 2 ನೇ ಹಂತದಲ್ಲಿ 20 ಎಕರೆ ಭೂಮಿಯನ್ನು ಹಂಚಿಕೆ ಮಾಡಿ, ನಿಯಮ ಉಲ್ಲಂಘಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮೆ:Brigade Estates & Projects Pvt Ltd., ಮತ್ತು ಮೆ: Brigade Foundation ರವರಿಗೆ ಯೋಜನೆ ಅನುಷ್ಠಾನಗೊಳಿಸಲು ಕಾಲಾವಕಾಶ ನೀಡಲಾಗಿದ್ದು, ವಿಸ್ತರಿಸಿದ ಕಾಲಾವಕಾಶದಲ್ಲಿ ಯೋಜನೆ ಅನುಷ್ಠಾನಗೊಳಿಸಲು ವಿಫಲರಾದಲ್ಲಿ ಮಂಡಳಿಯ ನಿಯಮಾನುಸಾರ ಕೆಐಎಡಿ ಕಾಯ್ದೆ ಕಲಂ 34-ಬಿರಡಿ ಜಮೀನು ಹಿಂಪಡೆಯುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ. |
| ಊ) | ಈ ಸಂಬಂಧ ಸರ್ಕಾರ ಕೈಗೊಂಡ ಕ್ರಮಗಳೇನು? | |

**ಸಂಖ್ಯೆ: ಸಿಐ 49 ಐಎಪಿ 2024**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ**
**ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**